ಮೂಲ ದಾವಾ ಸಂಖ್ಯೆ . 132/2016 ಪಿ ಡಬ್ಲ್ಯೂ 2

(ದಿನಾಂಕ 30-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ಈ ದಾವೆಯನ್ನು ಗುಣಸಾಗರಮ್ಮ ಇವರು ಪರಶುರಾಮ ಇವರ ವಿರುದ್ಧ ದಾಖಲಿಸಿದ್ದಾರೆ. ಅವರು ಸದರಿ ದಾವೆಯನ್ನು 3 ಅಡಿ ಜಾಗವನ್ನು ಬಿಟ್ಟಿಲ್ಲ ಅಂತಾ ದಾಖಲಿಸಿದ್ದಾರೆ. ಪರಶುರಾಂ ಇವರ ಪ್ಲಾಟ್ ನಂ. 80 ಇರುತ್ತದೆ. ಅದರಿ ಉದ್ದ ಅಗಲ 21 ಅಡಿ x 51 ಅಡಿ ಇರುತ್ತದೆ. ಸದರಿ ಪರಶುರಾಮ ಇವರು ಸದರಿ ಜಾಗದಲ್ಲಿ 45 x 17 ಅಡಿ ವಿಸ್ತೀರ್ಣದಲ್ಲಿ ಮನೆಯನ್ನು ಕಟ್ಟಿರುತ್ತಾರೆ. ಉಳಿದ ವಿಸ್ತೀರ್ಣವನ್ನು ಖಾಲಿ ಬಿಟ್ಟಿರುತ್ತಾರೆ. ಪರಶುರಾಮ ಇವರು ಆಸ್ತಿಯ ಚಕ್ಕುಬಂದಿ ಪೂಃ ರಸ್ತೆ, ಪಃ ಹನುಮಂತಪ್ಪ ಇವರ ಜಾಗ, ಉಃ ಗುಣಸಾಗರಮ್ಮ ಇವರ ಜಾಗ ಹಾಗೂ ದಃ ಟಿ ಜಿ ಎಂ ವಕೀಲರ ಜಾಗ ಇರುತ್ತದೆ. ಟಿ ಜಿ ಎಂ ಅಥವಾ ಅವರ ಅಣ್ಣನವರ ಹೆಸರಿನಲ್ಲಿರುವ ಜಾಗ ಮತ್ತು ಪರಶುರಾಮ ಇವರ ಮನೆಯ ನಡುವೆ ಕಾಮನ್ ವಾಲಿನ ಉದ್ದ 45 ಅಡಿ ಇದೆ ಮತ್ತು ಅದರ ಅಗಲ 1 ½ ಅಡಿ ಇದೆ. ಗುಣಸಾಗಮ್ಮ ಇವರ ಮನೆಯ ದಕ್ಷಿಣ ದಿಕ್ಕಿಗೆ ಪರಶುರಾಮ ಇವರು ಕಾಂಪೌಂಡ್ ವಾಲನ್ನು ಕಟ್ಟಿದ್ದಾರೆ ಅದನ್ನು ನಾನು ನೋಡಿದ್ದೇನೆ. ದಿಃ08-06-2016 ಮತ್ತು 09-06-2016 ರಂದು ಪ್ರತಿವಾದಿಯರು ಸದರಿ ಕಾಂಪೌಂಡ್ ವಾಲನ್ನು ತೆಗೆಯಲು ಪ್ರಯತ್ನಿಸಿದರು, ಅದನ್ನು ವಾದಿಯು ತಡೆದು ಅವರನ್ನು ವಾಪಾಸ್ ಕಳುಹಿಸಿರುತ್ತಾರಂತಾ ನಾನು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ. ಆ ರೀತಿ ಅಲ್ಲಿ ಯಾವುದೇ ಘಟನೆ ನಡೆದಿಲ್ಲವೆಂದರೆ ಸರಿಯಲ್ಲ. ಪರಶುರಾಮ ಇವರು ಕಾಂಪೌಂಡ್ ವಾಲ್ ಕಟ್ಟುವಾಗ ಪ್ರತಿವಾದಿಯು ಅವರಿಗೆ ಅಡ್ಡಿ ಮಾಡಿರುತ್ತಾರೆ ಆದರೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯು ಈ ದಾವೆಯಲ್ಲಿ ಸಲ್ಲಿಸಿದ ತಕರಾರಿನ ಬಗ್ಗೆ ವಾದಿಯು ನನಗೆ ತಿಳಿಸಿರುತ್ತಾರೆ. ಈ ದಾವೆಯ ವಿಚಾರವನ್ನು ನೀವು ವಾದಿ ಪರಶುರಾಮ ಇವರಿಂದ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಸಂಪೂರ್ಣ ವಿಚಾರ ನನಗೆ ಗೊತ್ತು ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಪೂರ್ಣ ವಿಚಾರ ನನಗೆ ಗೊತ್ತು. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯರ ಪ್ಲಾಟ್ ನಂ. ಎಷ್ಟು ಎಂದರೆ ಸಾಕ್ಷಿಯು 79 ಇರಬಹುದು ಎನ್ನುತ್ತಾರೆ. ವಾದಿಯು ಕಾಂಪೌಡ್ ವಾಲನ್ನು ಕಟ್ಟುವಾಗ ಪ್ರತಿವಾದಿಯು ತಕರಾರು ಮಾಡಿದ್ದು, ವಾದಿಯು ದೌರ್ಜನ್ಯದಿಂದ ಕಾಂಪೌಂಡ್

ವಾಲನ್ನು ಕಟ್ಟಿರುತ್ತಾರೆಂದರೆ ಸುಳ್ಳು, ಸಾಕ್ಷಿ ಮುಂದುವರೆದು ಆ ರೀತಿ ದೌರ್ಜನ್ಯ ಮಾಡಿದ್ದರೆ ತಕರಾರು ಮಾಡಬಹುದಾಗಿತ್ತು ಎನ್ನುತ್ತಾರೆ. ಆ ಬಗ್ಗೆ ಪ್ರತಿವಾದಿಯು ಪುರಸಭೆಗೆ ಅರ್ಜಿ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯ ಮುಕ್ಕಾಲು ಅಡಿ ಜಾಗವನ್ನು ವಾದಿಯು ಅತಿಕ್ರಮಣ ಮಾಡಿ ಕಾಂಪೌಂಡ್ ಗೋಡೆ ಕಟ್ಟಿದ್ದಾರೆಂದರೆ ಸುಳ್ಳು. ಆ ರೀತಿ ಅತಿಕ್ರಮಣ ಮಾಡಿ ಕಾಂಪೌಂಡ್ ಕಟ್ಟಿದ್ದರಿಂದ ಪ್ರತಿವಾದಿಯು ತಕರಾರು ಮಾಡಿರುತ್ತಾರೆಂದರೆ ಸುಳ್ಳು. ನನ್ನ ಮತ್ತು ಪರಶುರಾಮ ಇವರ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ಆ ಕಾರಣದಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ